711 ಶ್ರೀ ಶ್ರೀನಿವಾಸ್ ಎಂ. (ಮಂಡ್ಯ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮಂಡ್ಯ ವಿಧಾನಸಭಾ ಕ್ಷೇತ್ರದ ಮಂಡ್ಯ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ರೈತರ ಸಂತೆ ನಿರ್ಮಿಸಲು ಸರ್ಕಾರ ತೀರ್ಮಾನಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಎಲ್ಲೆಲ್ಲಿ ಸ್ಥಳಗಳನ್ನು ಗುರುತಿಸಲಾಗಿದೆ; (ವಿವರ ನೀಡುವುದು)

ಇ) ಗ್ರಾಮೀಣ ಸಂತೆಗಳಲ್ಲಿ ಜನರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಯಾವ ರೀತಿಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ಮಂಡ್ಯ ನಗರದಲ್ಲಿ ರೈತರ ಸಂತೆ ನಿರ್ಮಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ ತೀರ್ಮಾನಿಸಿದೆ.

ಆ) ರೈತರ ಸಂತೆ ಸ್ಥಾಪನೆ ಸಾಧ್ಯತೆ ವರದಿಯಲ್ಲಿ ಮಂಡ್ಯ ಸ್ಟೇಡಿಯಂ ಪಕ್ಕದಲ್ಲಿರುವ ಜಾಗ ರೈತರ ಸಂತೆ ಸ್ಥಾಪನೆಗೆ ಸೂಕ್ತವೆಂದು ಗುರುತಿಸಿದೆ. ಸದರಿ ಜಾಗ ಮಂಡ್ಯ ನಗರಸಭಾ ವ್ಯಾಪ್ತಿ ಸರ್ವೆ ನಂ.3 ರಲ್ಲಿದ್ದು ಉರ್ದು ಶಾಲೆಗೆ ಸೇರಿದ್ದು, ಆಟದ ಮೈದಾನವಿದ್ದು ರೈತರ ಸಂತೆ ಸ್ಥಾಪಿಸಲು ಸೂಕ್ತವಲ್ಲವೆಂದು ನಗರಸಭಾ ಆಯುಕ್ತರು ತಿಳಿಸಿರುತ್ತಾರೆ.

ಹಾಲಿ ಸಂತೆ ನಡೆಯುತ್ತಿರುವ ಸ್ಥಳದಲ್ಲಿ 64,685 ಚದುರ ಅಡಿ ಜಾಗ ರೈತರ ಸಂತೆ ಸ್ಥಾಪನೆಗೆ ನೀಡಲು ನಗರಸಭೆಯವರು ಕೆಲವು ಷರತ್ತುಗಳೊಂದಿಗೆ ಒಪ್ಪಿದ್ದು ಲೀಸ್ ಕಂ ಸೇಲ್ ಅಥವಾ ಲೀಸ್ ಮೇಲೆ ನೀಡಲು ನಿರಾಕರಿಸುತ್ತಾರೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಮಂಡ್ಯ ನಗರದ ಮಹಾವೀರ ವೃತ್ತದಲ್ಲಿ ನಗರಸಭೆ ಮಳಿಗೆಗಳ ಹಿಂಭಾಗ ಸಿಲ್ವರ್ ಜುಬಿಲಿ ಪಾರ್ಕ್ ಪಕ್ಕದಲ್ಲಿರುವ ಜಾಗವನ್ನು ಪಡೆಯಲು ಸಮಿತಿ ತೀರ್ಮಾನಿಸಿದ್ದು ನಗರದಲ್ಲಿ ಸಾರ್ವಜನಿಕ ಸಭೆ ಸಮಾರಂಭಗಳಿಗೆ ಗುರುತಿಸಿದ ಸ್ಥಳವಾಗಿದ್ದು ರೈತರ ಸಂತೆ ಸ್ಥಾಪನೆಗೆ ದೊರಕುವುದಿಲ್ಲವೆಂದು ತಿಳಿಸಿದ ಮೇರೆಗೆ ಕೈಬಿಡಲಾಗಿದೆ.

ಬೇರೆ ಸ್ಥಳದ ಲಭ್ಯತೆ ಇಲ್ಲದಿರುವುದರಿಂದ ಈವರೆವಿಗೆ ರೈತರ ಸಂತೆ ಸ್ಥಾಪನೆ ಸಾಧ್ಯವಾಗಿರುವುದಿಲ್ಲ.

ಇ) ಆರ್.ಐ.ಡಿ.ಎಫ್. ಯೋಜನೆಯಡಿ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಸಂತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಿದೆ.

ಈ) ತೆರೆದ/ಮುಚ್ಚಿದ ಹರಾಜುಕಟ್ಟೆ, ನೀರಿನ ಸೌಲಭ್ಯ, ಶೌಚಾಲಯ, ಸೋಲಾರ್ ವಿದ್ಯುತ್ ಸಂಪರ್ಕ ಹಾಗೂ ಸಿಮೆಂಟ್ ಕಾಂಕ್ರೀಟ್ ಪೇವ್‌ಮೆಂಟ್ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುವುದು.

713 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದ ರೈತರಿಗೆ ಕಬ್ಬು ಬೆಳೆಯಲು ಸರ್ಕಾರ ನೀಡುತ್ತಿರುವ ಪ್ರೋತ್ಸಾಹವೇನು;

ಆ) ಸಂಕಷ್ಟಗಳಿಗೆ ಸಿಲುಕಿದ ಕಬ್ಬು ಬೆಳೆಗಾರರಿಗೆ ಸರ್ಕಾರದಿಂದ ದೊರಕುವ ಸವಲತ್ತುಗಳಾವುವು;

ಇ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಅವು ಯಾವುವು; (ವಿವರ ಒದಗಿಸುವುದು)